ಕಂಡುಬರುತ್ತದೆ.

ಸ್ಟೊಮಾಟ ಮುಖಾಂತರ ಆಮ್ಲಜನಕ ಮತ್ತು ಅಲ್ಪ ಪ್ರಮಾಣದ ನೀರಿನ ಅಂಶ ಆವಿಯ ರೂಪದಲ್ಲಿ ಹೊರ ಬಂದರೆ, ಇತರೆ ರಂಧ್ರಗಳಲ್ಲಿ ಕೆಲವೊಮ್ಮೆ ನೇರವಾಗಿ ನೀರು ಚಿಮ್ಮುತ್ತದೆ ಅಥವಾ ಅಂಟು ನಂತಹ ವಸ್ತುಗಳು ಹೊರಬರುವುದನ್ನು ಗಮನಿಸಿರುತ್ತೇವೆ. ಒಮ್ಮೊಮ್ಮೆ ರಾತ್ರಿ ವೇಳೆ ಮರದ ಕೆಳಗಡೆ ನಿಂತಾಗ ನೀರಿನ ಹನಿಗಳು ಬಿದ್ದಂತಹ ಅನುಭವ ಹಲವರಿಗೆ ಆಗಿರಬಹುದು. ರಾತ್ರಿವೇಳೆ ದ್ಯುತಿಸಂಶ್ಲೇಷಣೆ ನಡೆಯುವುದಿಲ್ಲವಾದರೂ ಕೆಲವೊಮ್ಮೆ ಸಸ್ಯಗಳ ಆಂತರಿಕ ಕ್ರಿಯೆಗಳ ಒತ್ತಡದಿಂದ ನೀರಿನ ಹನಿಗಳು ಎಲೆಗಳಿಂದ ಜಿನುಗುವುದುಂಟು.

ಈ ಎಲ್ಲಾ ಕ್ರಿಯೆಗಳು ನಡೆಯಲು ನೀರು ಮತ್ತು ಉಷ್ಣಾಂಶವು ಬಹಳ ಮುಖ್ಯ. ಎರಡರಲ್ಲಿ ಯಾವುದಾದರೂ ಏರುಪೇರಾದರೂ ದ್ಯುತಿಸಂಶ್ಲೇಷಣೆ ಮತ್ತು ಆಹಾರ ಪಚನಕ್ರಿಯೆ ಸರಿಯಾಗಿ ಆಗುವುದಿಲ್ಲ. ಹೆಚ್ಚು ಹೆಚ್ಚು ಆಹಾರ ಉತ್ಪಾದನೆ ಮಾಡಬೇಕಾದಾಗ ಗಿಡಗಳು ಸ್ಟೊಮಾಟದ ಬಾಗಿಲನ್ನು ತೆರೆಯಬೇಕು ಹೀಗೆ ಮಾಡುವ ಪ್ರಕ್ರಿಯೆಯಲ್ಲಿ ಸಸ್ಯಗಳ ಬೇರುಗಳು ಭೂಮಿಯಿಂದ  ನೀರನ್ನು ಎಳೆದು ಎಲೆಗಳಿಗೆ ಕೊಡಬೇಕು ಎಲೆಗಳಲ್ಲಿ ಸಾಕಷ್ಟು ನೀರಿನ ಪ್ರಮಾಣ ಇದ್ದರಷ್ಟೇ ಸ್ಟೊಮಾಟ ತೆರೆದುಕೊಳ್ಳುತ್ತದೆ. ಇಲ್ಲವಾದಲ್ಲಿ ಇಲ್ಲ. ಹಾಗಾಗಿ ಗಿಡಗಳು ಸಹ ತಮಗೆಷ್ಟು ಬೇಕೋ ಅಷ್ಟೇ ಆಹಾರ ಉತ್ಪಾದನೆ ಮಾಡಿಕೊಳ್ಳುತ್ತದೆ ಏಕೆಂದರೆ ಹೆಚ್ಚು ಆಹಾರ ಉತ್ಪಾದನೆ ಮಾಡುವುದರಲ್ಲಿ ಹೆಚ್ಚಿನ ನೀರನ್ನು ಕಳೆದುಕೊಳ್ಳಬೇಕಾಗುತ್ತದೆ.

ನೀರು ಆಮ್ಲಜನಕವಷ್ಟೇಯಲ್ಲದೆ ಇನ್ನೂ ಹಲವು ಅಂಶಗಳು ಸಸ್ಯಗಳಿಂದ ಹೊರಬರುತ್ತಿರುತ್ತವೆ. ಹಿಂದಿನ ಒಂದು ಲೇಖನದಲ್ಲಿ ಔದುಂಬರ ವೃಕ್ಷದ ಬಗ್ಗೆ ಬರೆಯುತ್ತಾ ಮುಂಜಾವಿನಲ್ಲಿ ಅತ್ತಿಮರವು ಹಲವು ಬಗೆಯ ಉಪಯುಕ್ತ ರಾಸಾಯನಿಕಗಳನ್ನು ಬಿಡುಗಡೆ ಮಾಡುವುದರಿಂದ ಆ ಮರಗಳನ್ನು ಆ ಸಮಯದಲ್ಲಿ ಸುತ್ತು ಹಾಕುವುದರಿಂದ ನಮ್ಮಲ್ಲಿ ಚೈತನ್ಯ ಉಂಟಾಗಿ ಆರೋಗ್ಯ ವೃದ್ಧಿಸುತ್ತದೆ ಎಂಬುದರ ಬಗ್ಗೆ ಎಲ್ಲಪ್ಪ ರೆಡ್ಡಿ ಅವರು ಹೇಳಿದ ಮಾತುಗಳನ್ನು ನಿಮಗೆ ತಿಳಿಸಿದ್ದೆ.

ಇದೇ ರೀತಿ ಅಶೋಕವೃಕ್ಷದ ಬಗ್ಗೆಯೂ ನೀವೆಲ್ಲರೂ ತಿಳಿದುಕೊಳ್ಳಲೇಬೇಕು

ಸಾಮಾನ್ಯವಾಗಿ ಅಶೋಕ ವೃಕ್ಷವೆಂದಾಕ್ಷಣ ನಮ್ಮೆಲ್ಲರ ಮನಸ್ಸಿಗೆ ಬರುವುದು ರಸ್ತೆಯ ಪಕ್ಕದಲ್ಲಿ ಅಥವಾ ಉದ್ಯಾನವನಗಳಲ್ಲಿ ನೇರವಾಗಿ ಬೆಳೆಯುವ ಮರಗಳು. ಆದರೆ ಅದು ನಿಜವಾದ ಅಶೋಕವೃಕ್ಷವಲ್ಲ. ನಿಜವಾದ ಅಶೋಕ ವೃಕ್ಷದ ವೈಜ್ಞಾನಿಕ ನಾಮ ಸರಕಾ ಅಶೋಕ. ಅಶೋಕ ಎಂದರೆ ಶೋಕವನ್ನು ನಾಶ ಮಾಡುವುದು ಎಂಬ ಅರ್ಥ ಸಂಸ್ಕೃತದಲ್ಲಿದೆ. ಸದಾಕಾಲ ಚಿಗುರುತ್ತಿರುವ ತಾಮ್ರದ ವರ್ಣದ ಎಲೆಗಳನ್ನು ಹೊಂದಿರುವ ಈ ವೃಕ್ಷಕ್ಕೆ ತಾಮ್ರಪರಣೆ ಎನ್ನುವ ಇನ್ನೊಂದು ಹೆಸರು ಇದೆ.



ನನಗೆ ಮೊದಲಿನಿಂದಲೂ ಗಿಡಗಳ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ. ಅದರಲ್ಲೂ ಪುರಾಣಗಳಲ್ಲಿ ಉಲ್ಲೇಖವಾಗುವ ಮರಗಿಡಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಆಸ್ಥೆ ಬಹಳಷ್ಟಿದೆ. ನನಗೆ ರಾಮಾಯಣದಲ್ಲಿ ಉಲ್ಲೇಖವಾಗುವ ಅಶೋಕ ವನದ ಬಗ್ಗೆ ತಿಳಿಯ ಬೇಕೆನಿಸಿತು. ಶ್ರೀಲಂಕೆಯಲ್ಲಿ ಈಗಲೂ ಸಾಕಷ್ಟು ಅರಣ್ಯ ಪ್ರದೇಶವಿದೆ. ಬಗೆಬಗೆಯ ಮರಗಿಡಗಳಿವೆ. ಇನ್ನು ರಾಮಾಯಣ ಕಾಲದಲ್ಲಿ ಇದಕ್ಕಿಂತಲೂ ದಟ್ಟವಾದ ಕಾಡು ವೈವಿಧ್ಯಮಯ ಸಸ್ಯ ಪ್ರಭೇಧಗಳು ಇದ್ದಿರಬೇಕಲ್ಲವೇ? ಆದರೂ ರಾವಣಾಸುರ ಸೀತಾಮಾತೆಯನ್ನು ಅಶೋಕ ಮರದ ಕೆಳಗೆ ಏಕೆ ಇರಿಸಿದ? ಅರಳಿ, ಆಲ ಬೇವು, ಸಂಪಿಗೆ, ಮಾವು ಅಥವಾ ಇನ್ಯಾವುದೋ  ವೃಕ್ಷದ ಕೆಳಗೆ ಏಕೆ ಇರಿಸಲಿಲ್ಲ ಎಂಬ ಸಂದೇಹ ಸದಾ ಕಾಡುತ್ತಿತ್ತು. ಒಮ್ಮೆ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಶತಾವಧಾನಿ ಗಣೇಶರು ತಮ್ಮ ರಾಮಾಯಣದ ಪ್ರವಚನದಲ್ಲಿ  ಅಶೋಕ ಮರದ ಬಗ್ಗೆ ಉಲ್ಲೇಖಿಸಿದ್ದರು. ಅಶೋಕ ಮರದಲ್ಲಿ ಕೆಂಪು ಬಣ್ಣದ ಸುಂದರ ಮತ್ತು ಚಿತ್ತಾಕರ್ಷಕ ಹೂ ಗುಚ್ಛಗಳು ಬಿಡುತ್ತವೆ. ಇದನ್ನು ನೋಡಿ ಸೀತೆ ಮೋಹಗೊಂಡು ಮನಸ್ಸು ಬದಲಾಯಿಸಿ ರಾವಣಾಸುರನನ್ನು ವರಿಸಬಹುದೆಂಬ ಆಸೆಯಿಂದ ರಾವಣ ಹೀಗೆ ಮಾಡಿದನೆಂದು ಹೇಳಿದರು. ಅದೇ ದಿನ ಸಂಜೆ ಮನೆಗೆ ಬಂದ ನಂತರ ನಾನು ಅಶೋಕ ಮರದ ಬಗ್ಗೆ ಇನ್ನಷ್ಟು ಮಾಹಿತಿಗಳನ್ನು ಗೂಗಲ್ ಮುಖಾಂತರ ಕಲೆಹಾಕಿದೆ.

ವಿಶೇಷವೆಂದರೆ ಅಶೋಕ ಮರವು ಆಯುರ್ವೇದದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿರುವಂತಹ ಮರ. ಸ್ತ್ರೀ ರೋಗಗಳಿಗೆ ಇದು ರಾಮಬಾಣ. ಅಶೋಕಾರಿಷ್ಟವೆನ್ನುವ ಔಷಧವು ಸ್ತ್ರೀ-ರೋಗ ನಿವಾರಣೆಯಲ್ಲಿ ಬಹಳ ಪ್ರಾಮುಖ್ಯತೆ ವಹಿಸುತ್ತದೆ ಎಂದು ತಿಳಿಯಿತು. ಇವೆಲ್ಲಕ್ಕೂ ಮೀರಿ ಬಹಳ ಆಶ್ಚರ್ಯಕರ ಸಂಗತಿ ತಿಳಿದಿದ್ದೇನೆಂದರೆ ಕೇವಲ ಈ ಗಿಡದ ಕೆಳಗೆ ಕೂರುವುದರಿಂದ ಅಥವಾ ನಡೆದಾಡುವುದರಿಂದ ಸ್ತ್ರೀಯರಲ್ಲಿ ಕಂಡುಬರುವ ಅನೇಕ ರೋಗಗಳು ಶಮನವಾಗುತ್ತದೆ ಎಂಬ ವರದಿಗಳನ್ನು ಪ್ಲಾನೆಟ್ ಆಯುರ್ವೇದ ಸಂಸ್ಥೆಯ ಡಾ ವಿಕ್ರಮ್ ಚೌಹಾಣ್ ತಿಳಿಸಿರುತ್ತಾರೆ.